ಮೈಸೂರ ಗೆಜಿಟ.

ನಂ. 40 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 4, ಸನ್ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಜೇ ಬಕ್‌ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ ಜಡ್ಜೀರು, ಡಿ॥ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್‌ನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 2ನೇ ಸೆಪ್ಟಂಬರ್ 1884.

ನಂ. 133.—ಮೈಸೂರು ಪಟ್ಟಣದ ಇದರಡೀ ಕಂಡ ಚಕ್ಕು ಬಂದಿ ವಿವರಣೆಯು, ದಿವಾನರವರಿಂದ ಮಂಜೂರ್ಮಾಡಲ್ಪಟ್ಟು, ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ :—

ಸರಹದ್ದು ಲೈನು, ಮೈಸೂರು—ಶ್ರೀರಂಗಪಟ್ಟಣದ ರಸ್ತೆಯ 86ನೇ ಮೈಲಿಯ 6ನೇ ಫರಲಾಂಗಿನಲ್ಲಿರುವ ಕೇತುವೆಯ ಮಧ್ಯಭಾಗದಿಂದ ಉತ್ತರಕ್ಕೆ 500 ಅಡಿಗಳ ದೂರದ ಮೊದಲು ಪೂರ್ವ ದಿಕ್ಕಿಗಾಗಿ ತೋಟಗಳ ಮಾರ್ಗವಾಗಿ ದಾರಿಯ ಉತ್ತರ ದಿಕ್ಕಿಗೆ ವ್ಯಾಪಿಸಿ, ನೀರು ಹರಿಯುವ ಹಳ್ಳದ ಮಧ್ಯದ ವರಿವಿಗೂ ಸುಮಾರು 300 ಅಡಿಗಳ ತನಕಹೋಗಿ, ಅನಂತರ ನೆಟ್ಟಗೆಹೊರಟು ಶ್ರೀರಂಗಪಟ್ಟಣದ ಹಳೇರಸ್ತೆಯನ್ನು ಯರಡು ಕಾಲುದಾರಿಗಳು ಕೇರುವ ಕಡೆ ಸಂಧಿಸುತ್ತದೆ. ಶ್ರೀರಂಗಪಟ್ಟಣದ ಹಳೇ ರಸ್ತೆಯಲ್ಲಿರುವ ಈ ಗುರ್ತು ಆರಂಭಿಸಿ ಸರಹದ್ದು ಲೈನು, ನಿರಪತಿ ದಿಕ್ಕಿಗಾಗಿ ನೆಟ್ಟಗೆ ಹೊರಟು "ಗೋಪೀವರಧ" ತೋಟಿನ ಈಶಾನ್ಯ ದಿಕ್ಕಿಗೆ 20 ಅಡಿಗಳ ದೂರದಲ್ಲಿರುವ ಧಮನೂರು ಕೆರೆ ರಸ್ತೆ

ಯಲ್ಲಿ ಗುರ್ತು ಮಾಡಿರುವ ಸ್ಥಳದವರೆಗೆ ವ್ಯಾಪಿಸುತ್ತದೆ. ತೋಪಿನಿಂದ ನೆಟ್ಟಗೆ ಹೊರಟು ನವಾಬರ ಭಾವಿಯ ಈಶಾನ್ಯ ದಿಕ್ಕಿನ ಕೊನೆಗೆ 20 ಅಡಿಯಲ್ಲಿರುವ ಗುರ್ತಿನ ವರಿಗೆ ಹೋಗುತ್ತದೆ.

ಸರಹದ್ದು ಲೈನು, ನವಾಬರ ಭಾವಿಯಿಂದ ನೆಟ್ಟಗೆ ಹೊರಟು ಕಾಟಮ್ಮನಹಳ್ಳಿಗೆ ಹೋಗುವ ತೀಳುದಾರಿಯು ಕಾರಂಜೇಕೆರೆ ಕಾಲವೆಯನ್ನು ಬಿಡುವ ವರಿಗೆ ಹೋಗುತ್ತದೆ. ಅನಂತರ ನೆಟ್ಟಗೆ ಕೋಟೆಯ ಹಳೇ ಖಂದಕದ ಕೊನೆ ವರಿವಿಗೂ ಹೋಗಿ ಅಲ್ಲಿಂದ ಪೂರ್ವದಿಕ್ಕಿಗಾಗಿ ಕೋಟೆ ಖಂದಕದ ಸುತ್ತಲೂ ಈಶಾನ್ಯ ದಿಕ್ಕಿನ ಕೊನೆ ವರಿವಿಗೂ ವ್ಯಾಪಿಸುತ್ತದೆ.

ಸದರೀ ಹಳೇಕೋಟೆಯ ಈಶಾನ್ಯ ದಿಕ್ಕಿನ ಕೊನೆ ಮೊದಲುಗೊಂಡು, ಸರಹದ್ದು ಲೈನು, ಕುದ್ದ ದಕ್ಷಿಣಕ್ಕಾಗಿ ಸುಮಾರು 920 ಅಡಿಗಳ ವರಿವಿಗೂ ವ್ಯಾಪಿಸಿ ಅನಂತರ ನೆಟ್ಟಗೆ ಬನ್ನೂರು ರಸ್ತೆಯಲ್ಲಿ ಸದರೀ ರಸ್ತೆಯು ಚಾಮುಂಡೀ ಪೆಟ್ಟಿದ ರಸ್ತೆಗೆ ಕೂಡುವ ಸ್ಥಳದಿಂದ ಪೂರ್ವ ದಿಕ್ಕಿಗೆ 290 ಅಡಿಗಳ ವರಿವಿಗೆ ವ್ಯಾಪಿಸುತ್ತದೆ. ಈ ಉಳತೆಯು ರಸ್ತೆಗಳ ವಳ ಚರಂಡಿಗಳು ಕೂಡುವ ಸ್ಥಳದಿಂದ ತೆಗೆಯಲ್ಪಟ್ಟಿಯಿದೆ.

ಸರಹದ್ದು ಲೈನು, ಚಾಮುಂಡೀಪೆಟ್ಟಿದ ರಸ್ತೆಯನ್ನು ಶೇರಿ ಅದರ ಪೂರ್ವ ಭಾಗಕ್ಕಾಗಿ ಉದ್ದಕ್ಕೆ ಹೊರಟು ಕುಂಬಾರಹಳ್ಳಿ ಗ್ರಾಮವನ್ನು ಸುತ್ತಿಕೊಂಡು ಸದರೀ ರಸ್ತೆಯು ಕಾರಂಜೀ ಕೆರೆ ರಸ್ತೆಗೆ ಕೂಡುವ ಬಳಿ ಬಂದು ಶೇರುತ್ತದೆ.

ಅನಂತರ ಸರಹದ್ದು ಲೈನು, ಕಾರಂಜೇಕೆರೆ ರಸ್ತೆ ಮತ್ತು ಕುದುರೆ ಜಾಜಿನ ಬೋರೆ ರಸ್ತೆ ಇವುಗಳ ದಕ್ಷಿಣಕ್ಕಾಗಿ ಹೊರಟು, ಗೊಬ್ಬಿಕೆರೆ ತಲಾವಿನ ಯೇರೀ ಮೇಲುಭಾಗಕ್ಕಾಗಿ ಚಾಮುಂಡೀ ಪೆಟ್ಟಿದ ರಸ್ತೆಯಬಳಿ ಕಾಲ್ವೆದಾಟುವ ಸ್ಥಳದವರೆಗೆ ವ್ಯಾಪಿಸುತ್ತೆ; ಅನಂತರ ರಸ್ತೇ ಮಾರ್ಗವಾಗಿ ಗಾಸಪ್ಪ ತೊಗಚಿ ಮಠವನ್ನ ಶೇರಿಸಿಕೊಂಡು ದೊಡ್ಡಕೆರೆ ತಲಾವಿನ ಹೆಚ್ಚಿಗೆ ನೀರು ಹರಿದು ಹೋಗುವ ಕಾಲ್ವೆಯ ದಕ್ಷಿಣಕ್ಕೆ 235 ಅಡಿಗಳ ದೂರದಲ್ಲಿ ಮೈಸೂರು–ನಂಜನಗೂಡು ರಸ್ತೆಯನ್ನು ಸಂಧಿಸುತ್ತದೆ. ಈ ಗುರ್ತು 89ನೇ ಮೈಲಿಯ 8ನೇ ಫರ್‌ಲಾಂಗಿನಲ್ಲಿರುತ್ತೆ.

ಸರಹದ್ದು ಲೈನು, ಅನಂತರ ತೋಟಗಳ ಮಾರ್ಗವಾಗಿ ಸೊಟ್ಟು ಸೊಟ್ಟಾದ ದಾರಿಯನ್ನು ಅನುಸರಿಸಿ ಹೋಗುತ್ತದೆ. ಸದರೀ ದಾರಿ ಯಾವತ್ತೂ ನಕ್ಷೆಯಲ್ಲಿ ಕಾಣಿಸಿ ಯಿರುವದಿಲ್ಲ, ಮತ್ತು ಸರಹದ್ದು ಲೈನು, ಹಾಗೆಯೇ ಹೊರಟು 89ನೇ ಮೈಲಿಯ 7ನೇ ಫರ್‌ಲಾಂಗು ಕಲ್ಲಿನಿಂದ 160 ಅಡಿಗಳ ದೂರದಲ್ಲಿ ಹಳೇ ಅಗ್ರಹಾರದ ರಸ್ತೆಯನ್ನು ಸಂಧಿಸುತ್ತದೆ.

ಸರಹದ್ದು ಲೈನು, ಅನಂತರ ನೆಟ್ಟಗೆ ದೊಡ್ಡಕೆರೆ ಕಾಲ್ವೆ ಕೊನೆವರಿಗೂ ಹೋಗಿ, ನೀರು ಕಾಲ್ವೆಯ ಪಶ್ಚಿಮ ಭಾಗಕ್ಕೂ, ಕನ್ನೇಗೌಡನ ಕೊಪ್ಪಲು ಗ್ರಾಮದ ಸುತ್ತಲೂ ಯಿರುವ ತೀಳುದಾರಿಯ ದಕ್ಷಿಣಕ್ಕಿಗೂ, ಮತ್ತು ತೀಳುದಾರಿಯು ನೀರು ಸರಬರಾಯಿ ಆಗುವ ಕಾಲ್ವೆಯನ್ನು ಸಂಧಿಸುವ ಸ್ಥಳದ ಪಶ್ಚಿಮ ಭಾಗಕ್ಕೂ ಉದ್ದಕ್ಕೆ ಹೊರಟು, ಕೊರಕಲು ರಸ್ತೆಯ ಮೇಲ್ಭಾಗದಲ್ಲಿ ಸದರೀ ದೊಡ್ಡ ಕೆರೆ ಕಾಲ್ವೆಯ ಕೆಳ ಕಟ್ಟೆಯನ್ನು ಅನುಸರಿಸುತ್ತದೆ, ಅನಂತರ ಕಾಲ್ವೇ ಭೂಮಿಯ ಸರಹದ್ದನುಸರಿಸಿ ಸ್ವಲ್ಪ ದೂರದವರಿವಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಡಿಸ್ಟಿಲೇರಿ ಯಾನೆ ಭಟ್ಟಿಮನೆಯನ್ನ ಪೂರ್ವಭಾಗಕ್ಕೆ ಬಿಟ್ಟು ಕೂಕರಹಳ್ಳಿ ಕೆರೆಯ ಹಿಂಭಾಗದ ರಸ್ತೆಗೆ ಹೋಗಿ ಶೇರುತ್ತದೆ.

ಸರಹದ್ದು ಲೈನು, ಅನಂತರ ಕೂಕರಹಳ್ಳಿ ಕಾಲ್ವೆಯ ಪಶ್ಚಿಮಭಾಗಕ್ಕೆ 60 ಅಡಿಗಳವರಿಗೂ ನೆಟ್ಟಗೆ ಹೋಗುತ್ತದೆ, ಅನಂತರ ಉತ್ತರಕ್ಕೆ ತಿರುಗಿ ಪಡುವಾರೆಹಳ್ಳಿ ಬಳಿಯಣ ಹಳೇರಸ್ತೆ ಮತ್ತು ಹೊಸರಸ್ತೆ ಇವೆರಡೂ ಶೇರುವ ಸ್ಥಳದ ಪೂರ್ವಭಾಗಕ್ಕೆ 245 ಅಡಿಗಳ ವರಿಗೂ ಹೋಗುತ್ತದೆ, ಅನಂತರ ಪಡುವಾರಹಳ್ಳಿ ಸುತ್ತಿಕೊಂಡು ಸದರೀ ಗ್ರಾಮದ ಪಶ್ಚಿಮ ಭಾಗಕ್ಕಾಗಿ ಉದ್ದಕ್ಕೆ ಜೀವಣರಾಯರ ಕೆರೆ ಕಾಲ್ವೆವರಿಗೂ ಹೋಗಿ ಕೆನ್ನೀಕಟ್ಟೆ ಕಾಲ್ವೆಯ ಉತ್ತರ ಭಾಗದ ಕಟ್ಟೆಯನು ಅನುಸರಿಸಿ ಹಳ್ಳೀರಸ್ತೆಯ ಪಶ್ಚಿಮ ಭಾಗಕ್ಕಾಗಿ ಹುಂಡೀಹಳ್ಳದ ವರಿಗೂ ವಿಸ್ತರಿಸುತ್ತದೆ; ಅಲ್ಲಿಂದ ಹುಂಡೀಹಳ್ಳ ಅನುಸರಿಸಿ ರೈಲ್ ಕೇತುವೆ ಮಾರ್ಗವಾಗಿ ಫೂರ್ಣಯ್ಯನವರ ಕಾಲ್ವೆಗೆ ಪಶ್ಚಿಮ ಭಾಗಕ್ಕಾಗಿ ಬೆಳಗುಳದ ರಸ್ತೆಯಲ್ಲಿರುವ ಜೋಡೀ ತೆಂಗಿನ ಮರದ ಕೇತುವೆವರಿಗೂ ವ್ಯಾಪಿಸುತ್ತದೆ; ಅಲ್ಲಿಂದ ರಸ್ತೆಯ ಉತ್ತರ ದಿಕ್ಕಿಗಾಗಿ ಕೊನೆವರಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ರಸ್ತೆಯಲ್ಲಿ ಸರಹದ್ದು ಲೈನ್ ಆರಂಭವಾಗಿದ ಸ್ಥಳಕ್ಕೆ ಬಂದು ಶೇರುತ್ತದೆ.

ತಾರೀಖು 22ನೇ ಸೆಪ್ಟಂಬರ್ 1884.

ನಂ. 140.—ಸಾಲ್ ಮಜಕೂರು ಆಗಸ್ಟು 30ನೇ ಮಕ್ಕುಮಿನ ಮೈಸೂರ ಗೆಜೆಟ್ 223ನೇ ಪುಟದಲ್ಲಿ ಛಾಪಿಸಲ್ಪಟ್ಟ ಅದೇ ಮಾಹೆ 21ನೇ ಮುಕ್ಕಂ 126ನೇ ನಂಬರ್ ಇಸ್ತಿಹಾರ್ ನಾಮೆಯನ್ನು ಬದಲಾಯಿಸಿ ಇದರಡೀ ಕಾಣಿಸಿರುವ ತಖ್ತೆಯು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತೆ:—

ನೂಗಣಿ ಜಿಲ್ಲೆ.	ನಂಬರು.	ಕಾಯಂಮಾಡಲ್ಪಡಬೇಕಾದ ಗ್ರಾಮಗಳು.	ನಂಬರು.	ಮೂರನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳು.	ಪರಾ.
1	2	3	4	5	6
		ಹಾಸನ	ತಾಲ್ಲೂಕು.		
ಹಾಸನ ಜಿಲ್ಲೆ.	1	ರಾಮನಹಳ್ಳಿ ..	1	ಗುಡಬೊಮ್ಮನಹಳ್ಳಿ	
	2	ಭಕ್ತರವಳ್ಳಿ (ಮೂರನೇ ಭಾಗ) ..	1	ಮಾಯಿಗೊಂಡನಹಳ್ಳಿ	
	3	ಕೊಡಗತವಳ್ಳಿ	..	..	ಭರತೂರಿಗೆ ಸೇರಿದ ಈ ಎರಡು ದಾಖಲೆ ಗ್ರಾಮಗಳೂ ಮೂಲತಾಕಾಗಿರುವದರಿಂದ ಈ ಎರಡೂ ಬೇರೇ ಗ್ರಾಮಗಳಾಗಿರತಕ್ಕದ್ದು, ಅಸಲೀಭರತೂರಿಗೆ ಸೇರತಕ್ಕದ್ದಲ್ಲಾ.
	4	ಕಟ್ಟೇಹೊಸೂರು	..	..	
	5	ಹಂಗಲಿಗೆ ..	1	ಮೂಲಗೊಂಡನಹಳ್ಳಿ	
	6	ಮಾದಿಹಳ್ಳಿ	1	ಭಕ್ತರವಳ್ಳಿ (ಬೇಜಕರಾಖ)	
			2	ಹುಲಕುಂದ	
	7	ಚಿಕ್ಕನಹಳ್ಳಿ ..	1	ಬುಕ್ಕಾಪುರ	
	8	ಅಮಲೇಪುರ ..	1	ಮಲ್ಲೇನಹಳ್ಳಿ	
ಪಾಳ್ಯ	9	ವಲ್ಗರಹಳ್ಳಿ ..	2	ಪಾಯಿಂಥನಹಳ್ಳಿ	
ಕಾಟ್ಯ	10	ದೇನಿಹಳ್ಳಿ ..	1	ಮೊಡ್ಲಚಿಕ್ಕನಹಳ್ಳಿ	
	11	ಮಂಚನಹಳ್ಳಿ ..	1	ಪಡ್ಲುಚಿಕ್ಕನಹಳ್ಳಿ	

ತಾರೀಖು 24ನೇ ಸೆಪ್ಟಂಬರ್ 1884.

ನಂ. 141.—ಚಿತ್ರದುರ್ಗದ ಅಮಲ್ದಾರ್ ವ 3ನೇ ಕ್ಲಾಸ್ 'ಮಾಜಿಸ್ಟ್ರೇಟ್ ನಾರಣಯ್ಯಂಗಾರು) ಮತ್ತು ಹುಳಿಯಾರದ ಡೆಪ್ಯುಟಿ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಯಸ್. ಕೃಷ್ಣರಾಯರು ಯಿವರುಗಳು, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 335ನೇ ಸೆಕ್ಷನ್ ನಿಯಮವನ್ನನುಸರಿಸಿ ಫಿರ್ಯಾದಿಗಳ ವ ಸಾಕ್ಷಿಗಾರರ ಸಾಕ್ಷ್ಯತ್ವವನ್ನು ಕನ್ನಡ ಭಾಷೆಯಲ್ಲಿ ಸ್ವದಸ್ತೂರ್ ಬರೆದುಕೊಳ್ಳುವದಕ್ಕೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ನಂ. 142.—ಕೋಲಾರ ಡಿಸ್ಟ್ರಿಕ್ಟು, ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ ಅಬ್ದುಲ್ ಅಜೀಜರಿಗೆ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ಎಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬಮೋಜೀಬ್ ಹುಕ್ಕುಂ,

ಆರ್. ವಿಜಯಾಂದ್ರರಾವ್,

ಸೆಕ್ರಟೇರಿ.